(9)

ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

**ಸಂಖ್ಯೆ: DPA/TP/LAO/05/2021-22/396** ದಿನಾಂಕ: 16 SEP 2021

## "ಪ್ರಾರಂಭಿಕ ಪ್ರಮಾಣ ಪತ್ರ"

**ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ, ಕೆಂಜಿಗನಹಳ್ಳಿ ಗ್ರಾಮದ ಸರ್ವೆ ನಂ. 131 ರಲ್ಲಿ (2ಎ), 132 ರಲ್ಲಿ (2ಎ), 133 ರಲ್ಲಿ (2ಎ), 134 ರಲ್ಲಿ (2ಎ), 135 ರಲ್ಲಿ (2ಎ-01ಗು), 136 ರಲ್ಲಿ (1ಎ-10ಗು) ಮತ್ತು 137 ರಲ್ಲಿ (1ಎ-12ಗು) ಒಟ್ಟು 12ಎಕರೆ 23ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ಉದ್ದೇಶದ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಿರುವ ಬಗ್ಗೆ.**

**ಉಲ್ಲೇಖ: 1) ಅರ್ಜಿದಾರರ ಅರ್ಜಿ ದಿನಾಂಕ: 23-07-2021**

**2) ದಿನಾಂಕ: 27-07-2021 ರಂದು ನಡೆದ ಪ್ರಾಧಿಕಾರದ ಹನ್ನೊಂದನೇ (11) ಸಭೆಯ ವಿಷಯ ಸಂಖ್ಯೆ 11.22 ರ ನಿರ್ಣಯ.**

**3) ಶುಲ್ಕ ಪಾವತಿಸಿದ ದಿನಾಂಕ: 24-08-2021.**

****

ಉಲ್ಲೇಖ (1) ರ ಅರ್ಜಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ, ಕೆಂಜಿಗನಹಳ್ಳಿ ಗ್ರಾಮದ ಸರ್ವೆ ನಂ. 131 ರಲ್ಲಿ (2ಎ), 132 ರಲ್ಲಿ (2ಎ), 133 ರಲ್ಲಿ (2ಎ), 134 ರಲ್ಲಿ (2ಎ), 135 ರಲ್ಲಿ (2ಎ-01ಗು), 136 ರಲ್ಲಿ (1ಎ-10ಗು) ಮತ್ತು 137 ರಲ್ಲಿ (1ಎ-12ಗು) ಒಟ್ಟು 12ಎಕರೆ 23ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಉದ್ದೇಶದ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಲಾಗಿರುತ್ತದೆ. ಪ್ರಸ್ತಾವನೆಯನ್ನು ಉಲ್ಲೇಖ (2) ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಅನುಮೋದನೆ ಸಂಬಂಧ ಶುಲ್ಕ ಪಾವತಿಸಲು ತಿಳಿಸಲಾಗಿದ್ದು, ಉಲ್ಲೇಖ (3) ರಲ್ಲಿ ಶುಲ್ಕಗಳನ್ನು ಪಾವತಿಸಲಾಗಿರುತ್ತದೆ. ಈ ಸಂಬಂಧ ಮುಂದಿನ ಕ್ರಮವಹಿಸಿ ಸ್ಥಳದಲ್ಲಿ ಕಂದಾಯ ನಕ್ಷೆಗೆ ಅನುಗುಣವಾಗಿ ವಿನ್ಯಾಸ ನಕ್ಷೆಯ ಅಳತೆಗಳನ್ನು ಭೌತಿಕವಾಗಿ ಗುರುತಿಸಲು ಈ ಕೆಳಕಂಡ ಷರತ್ತುಗಳೊಂದಿಗೆ **Demarcation** ನಕ್ಷೆಗೆ ಅನುಮೋದನೆ ನೀಡಲಾಗಿದೆ.

## ಷರತ್ತುಗಳು

1) Demarcation ನಕ್ಷೆಯ ಅಳತೆಗಳಂತೆ ಸ್ಥಳದಲ್ಲಿ ರಸ್ತೆಗಳು, ಉದ್ಯಾನವನ, ನಾಗರೀಕ ಸೌಲಭ್ಯ ಜಾಗಗಳನ್ನು ಯಥಾವತ್ತಾಗಿ ಅಳವಡಿಸತಕ್ಕದ್ದು ಹಾಗೂ ವ್ಯತ್ಯಾಸಗಳು ಕಂಡು ಬಂದಲ್ಲಿ ಪ್ರಾಧಿಕಾರಕ್ಕೆ ಮಾಹಿತಿ ನೀಡಿ ಪರಿಷ್ಕರಿಸಿಕೊಳ್ಳತಕ್ಕದ್ದು.
2) Demarcation ನಕ್ಷೆಯ ಅಳತೆಯಂತೆ ಪ್ರಸ್ತಾಪಿಸಿರುವ ಉದ್ಯಾನವನ ಹಾಗೂ ರಸ್ತೆ ಜಾಗಗಳನ್ನು ಸ್ಥಳೀಯ ಸಂಸ್ಥೆಗೆ ಮತ್ತು ನಾಗರೀಕ ಸೌಲಭ್ಯ ಜಾಗವನ್ನು ಈ ಪ್ರಾಧಿಕಾರಕ್ಕೆ ಪರಿತ್ಯಾಜನಾ ಪತ್ರದ (Relinquishment Deed) ಮೂಲಕ ಹಸ್ತಾಂತರಿಸಿಕೊಳ್ಳಲಾಗುವುದು.
3) Demarcation ನಕ್ಷೆಯಂತೆ ಸ್ಥಳದಲ್ಲಿ ಅಳತೆಗಳನ್ನು ಅಳವಡಿಸಿದ ನಂತರ ವಿನ್ಯಾಸವನ್ನು ಅಭಿವೃದ್ಧಿಪಡಿಸಲು ಪ್ರಾಧಿಕಾರದಿಂದ ತಾತ್ಕಾಲಿಕ ವಿನ್ಯಾಸ ಅನುಮೋದನೆ ಪಡೆಯತಕ್ಕದ್ದು.

16/09/2021

ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ. 16.09.21

**ಇವರಿಗೆ,**

ಶ್ರೀ ಕೆ.ಎಸ್. ಚಿದಾನಂದ ಬಿನ್ ಶಿವಣ್ಣ
ನಂ. 41, 2ನೇ ಕ್ರಾಸ್, 2ನೇ ಮೈನ್,
10ನೇ ಬ್ಲಾಕ್, 3ನೇ ಸ್ಟೇಜ್, ನಾಗರಬಾವಿ,
ಬೆಂಗಳೂರು – 560 072.